**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಸಕಾಲ ಸೇವೆಗಳಲ್ಲಿ ಮ್ಯಾನ್ಯುಯಲ್ ಆಗಿ ಅರ್ಜಿ ಸ್ವೀಕರಿಸುವುದನ್ನು ನಿಲ್ಲಿಸಿ, ಅರ್ಜಿ ಸ್ವೀಕೃತಿಗೆ ಆನ್ ಲೈನ ತಂತ್ರಾಂಶದ (ಸೇವಾ ಸಿಂಧು) ಬಳಕೆಯನ್ನು ಕಡ್ಡಾಯ ಮಾಡುವ ಬಗ್ಗೆ.

**ಓದಲಾಗಿದೆ:** ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಆರ್‌ಸಿಎಸ್/ಆರ್ ಇಸಿ/ಆರ್-2/11/2018-19, ದಿ:21-01-2020.

******

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರ ಕಛೇರಿಯ 12 ಸೇವೆಗಳನ್ನು ಸಕಾಲ ತಂತ್ರಾಂಶದಲ್ಲಿ ಅಳವಡಿಸಲಾಗಿದ್ದು, ಸಕಾಲ ಸೇವೆಗಳಡಿ ಬರುವ ಅರ್ಜಿಗಳನ್ನು ಸಕಾಲ ವೆಬ್ ಪೋರ್ಟಲ್‌ನಲ್ಲಿ ದಾಖಲಿಸಿ ಸಕಾಲದಲ್ಲಿಯೇ ವಿಲೇವಾರಿ ಮಾಡಲು ಆದೇಶ ಹೊರಡಿಸುಂತೆ ಕೋರಿರುತ್ತಾರೆ.

ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಮತ್ತು (ತಿದ್ದುಪಡಿ) ಅಧಿನಿಯಮ, 2014ಗಳ ಅನುಸೂಚಿಯಲ್ಲಿ, ಸಹಕಾರ ಸಂಘಗಳ ನಿಬಂಧಕರ ಕಛೇರಿಯ 12 ನಾಗರೀಕ ಸೇವೆಗಳನ್ನು ಕರ್ನಾಟಕ ಸಕಾಲ ಸೇವೆಗಳಡಿಯಲ್ಲಿ ಗುರುತಿಸಲಾಗಿದೆ.

ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:26-12-2018ರಂದು ನಡೆದ ಇಲಾಖೆಯ ಕಾರ್ಯದರ್ಶಿಗಳ ಸಭೆಯಲ್ಲಿ ಸಕಾಲ ಯೋಜನೆಯ ಅನುಷ್ಠಾನದ ಕುರಿತು ಚರ್ಚಿಸಿದ್ದು, ಸಕಾಲ ಯೋಜನೆಯಡಿ ಅಧಿಸೂಚಿಸಲಾಗಿರುವ ಸೇವೆಗಳನ್ನು ಮತ್ತಷ್ಟು ನಾಗರೀಕ ಸ್ನೇಹಿಯನ್ನಾಗಿಸಲು ಮತ್ತು ಸಕಾಲದಡಿ ಅಧಿಸೂಚಿಸಲಾಗಿರುವ ಸೇವೆಗಳಿಗೆ ನಾಗರೀಕರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಕಾಶವನ್ನು ಕಲ್ಪಿಸುವ ನಿಟ್ಟಿನಲ್ಲಿ ಇಲಾಖೆಗಳು ಕಾರ್ಯಪ್ರವೃತ್ತರಾಗಬೇಕೆಂದು ಮುಖ್ಯ ಕಾರ್ಯದರ್ಶಿಗಳು ಸೂಚಿಸಿರುತ್ತಾರೆ.

ಸೇವಾ ಸಿಂಧು ಯೋಜನೆಯಡಿ ಸಹಕಾರ ಇಲಾಖೆಯ ಸೇವೆಗಳನ್ನು ಗುರುತಿಸಿ, ಅವುಗಳಿಗೆ ಆನ್‌ಲೈನ್ ತಂತ್ರಾಂಶವನ್ನು ಅಭಿವೃದ್ಧಿಗೊಳಿಸಲಾಗಿರುತ್ತದೆ. ಸದರಿ ಆನ್‌ಲೈನ್ ತಂತ್ರಾಂಶದ ಬಳಕೆಯನ್ನು ಕಡ್ಡಾಯ ಮಾಡುವುದರಿಂದ ಸಕಾಲ ಅಧಿನಿಯಮದ ದತ್ತಾಂಶವನ್ನು ಬೈಪಾಸ್ ಮಾಡುವುದನ್ನು ತಡೆಗಟ್ಟಬಹುದು ಎಂದು ಸೂಚಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಈಗಾಗಲೇ ಅಭಿವೃದ್ಧಿ ಪಡಿಸಲಾಗಿರುವ ಆನ್‌ಲೈನ್ ತಂತ್ರಾಂಶವನ್ನು ಬಳಸಿಕೊಂಡು ನೀಡಬಹುದಾದ ಸೇವೆಗಳಿಗೆ, ಮ್ಯಾನ್ಯುಯಲ್ ಆಗಿ ಅರ್ಜಿ ಸ್ವೀಕರಿಸಿರುವುದನ್ನು ನಿಲ್ಲಿಸುವ ಮತ್ತು ಅರ್ಜಿ ಸ್ವೀಕೃತಿಗೆ ಆನ್‌ಲೈನ್ ತಂತ್ರಾಂಶದ ಬಳಕೆಯನ್ನು ಕಡ್ಡಾಯ ಮಾಡಲು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 14 ಸಿಎಲ್‌ಎಂ 2020(ಇ), ಬೆಂಗಳೂರು, ದಿನಾಂಕ: 26-02-2020.**

ಸಹಕಾರ ಸಂಘಗಳ ನಿಬಂಧಕರ ಕಛೇರಿಯ 12 ನಾಗರೀಕ ಸೇವೆಗಳನ್ನು ಕರ್ನಾಟಕ ಸಕಾಲ ಸೇವೆಗಳ ಮುಖಾಂತರ ನಾಗರೀಕ ಸೇವೆಗಳನ್ನು, ಈಗಾಗಲೇ ಅಭಿವೃದ್ಧಿ ಪಡಿಸಲಾಗಿರುವ ಆನ್‌ಲೈನ್ ತಂತ್ರಾಂಶವನ್ನು ಬಳಸಿಕೊಂಡು ನೀಡಬಹುದಾದ ಸೇವೆಗಳಿಗೆ, ಅರ್ಜಿ ಸ್ವೀಕೃತಿಗೆ ಆನ್‌ಲೈನ್ ತಂತ್ರಾಂಶದ (ಸೇವಾ ಸಿಂಧು) ಬಳಕೆಯನ್ನು ಕಡ್ಡಾಯಗೊಳಿಸಲಾಗಿದೆ ಮತ್ತು ಮ್ಯಾನ್ಯುಯಲ್ ಆಗಿ ಅರ್ಜಿ ಸ್ವೀಕರಿಸಿರುವುದನ್ನು ಕೂಡಲೇ ನಿಲ್ಲಿಸಲಾಗಿದೆ.

ಈ ಸಂಬಂಧ ಇ-ಆಡಳಿತ ಇಲಾಖೆಯು ಕೆಳಕಂಡ ಆನ್‌ಲೈನ್ ಸೇವೆಗಳನ್ನು ಸಾರ್ವಜನಿಕರ ಉಪಯೋಗಕ್ಕೆ **www.sakala.kar.nic.in** ಜಾಲತಾಣದಲ್ಲಿ ಪ್ರಕಟ ಪಡಿಸಿರುತ್ತದೆ.

| | ಕ್ರ ಸಂ | **ಸೇವೆಗಳ ಹೆಸರು** |
|---|---|---|
| ಸಹಕಾರ ಸಂಘಗಳ ನಿಬಂಧಕರ ಕಛೇರಿಗೆ ಸಂಬಂಧಿಸಿದಂತೆ 12 ನಾಗರೀಕ ಸೇವಗಳು | 1 | ಸಹಕಾರ ಸಂಘಗಳ ಕಾಯ್ದೆ 1959ರ ಪ್ರಕಾರಣ 7ರಡಿ ಸಹಕಾಯ ಸಂಘಗಳ ನೋಂದಣಿ |
| | 2 | ಸಹಕಾರ ಸಂಘಗಳ ಕಾಯ್ದೆ 1959ರಡಿ ಉಪನಿಯಮಗಳ ತಿದ್ದುಪಡಿ |
| | 3 | ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಡಿ ಸೌಹಾರ್ದ ಸಹಕಾರಿಗಳ ನೋಂದಣಿ |
| | 4 | ಸೌಹಾರ್ದ ಸಹಕಾರಿ ಕಾಯ್ದೆ 1997ರನ್ವಯ ಉಪನಿಯಮಗಳ ತಿದ್ದುಪಡಿ |
| | 5 | ಕಲಂ 30ಬಿ ರನ್ವಯ ಗೃಹ ನಿರ್ಮಾಣ ಸಹಕಾರ ಸಂಘಗಳ ಜೇಷ್ಠತಾ ಪಟ್ಟಿಯನ್ನು ಅನುಮೋದಿಸುವುದು. |
| | 6ಎ | ಚೀಟಿ ನಿಧಿ ಕಾಯ್ದೆ 1982ರನ್ನಯ ಪೂರ್ವ ಮಂಜೂರಾತಿ ಆದೇಶ ನೀಡುವುದು |
| | 6ಬಿ | ಚೀಟಿ ನಿಧಿ ಕಾಯ್ದೆ 1982ರನ್ನಯ ಪ್ರಾರಾಂಭಿಕ ದೃಢೀಕರಣ ಪತ್ರ |

| | | |
|---|---|---|
| | 7 | ಲೇವಾದೇವಿದಾರರ/ಗಿರವಿದಾರರ ಪರವಾನಗಿ ನೀಡುವುದು. |
| | 8 | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960, ನಿಯಮ 17ರನ್ವಯ ಸಿಬ್ಬಂದಿ ವೃಂದಬಲ ಮತ್ತು ವೇತನ ಶ್ರೇಣಿ ಮಂಜೂರಾತಿ ಕುರಿತು |
| | 9 | ಆಪದ್ಧನ ವಿನಿಯೋಗಿಸಲು ಕರ್ನಾಟಕ ಸಹಕಾರ ಸಂಘಗಳ ನಿಯಮಗಳ 1960ರ ನಿಯಮ 23ರ ರೀತ್ಯ |
| | 10 | ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಪ್ರಕರಣ 8ರಡಿ ಸಂಘ ಸಂಸ್ಥೆಗಳ ನೋಂದಣಿ |
| | 11 | ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಪ್ರಕರಣ 9ರಡಿ ಧ್ಯೇಯೋದ್ದೇಶಗಳ **(Memorandum of association)**ತಿದ್ದುಪಡಿ. |
| | 12 | ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಪ್ರಕರಣ 10ರಡಿ ಸಂಘದ ಹೆಸರು, ನಿಯಮ ಮತ್ತು ನಿಬಂಧನೆಗಳ ತಿದ್ದುಪಡಿ |

ಮೇಲೆ ಪಟ್ಟಿ ಮಾಡಿರುವ, ಎಲ್ಲಾ ಸೇವಾಸಿಂಧು ಸೇವೆಗಳನ್ನು ಎಲ್ಲಾ ಕಛೇರಿಗಳಲ್ಲಿ, ಈ ಕೂಡಲೆ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಲು ಈ ಮೂಲಕ ಆದೇಶಿದೆ.

**ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**(ಕೆ.ಎಂ. ಆಶಾ)**
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಪ್ರತಿಯನ್ನು:**

1. ಸಹಕಾರ ಸಂಘಗಳ ನಿಬಂಧಕರು ನಂ.01, ಆಲಿಆಸ್ಕರ್ ರಸ್ತೆ, ಬೆಂಗಳೂರು-52.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇ-ಆಡಳಿತ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಸಕಾಲ ಮಿಷಿನ್, ಕರ್ನಾಟಕ ಸರ್ಕಾರ.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.